# ‘ಗೌರ್ಮೆಂಟ್ ಬ್ರಾಹ್ಮಣ’ ಆತ್ಮಕಥೆಯು ದಲಿತ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಶೋಷಣೆಯ ಸಂಗತಿಗಳ ಸಂಕಥನ

**ಉಮೇಶ**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ.

**DOI: https://doi.org/10.5281/zenodo.18116403**

## ABSTRACT:

ಅರವಿಂದ ಮಾಲಗತ್ತಿ ಅವರ ‘ಗೌರ್ಮೆಂಟ್ ಬ್ರಾಹ್ಮಣ’ ಆತ್ಮಕಥೆಯು ಕನ್ನಡದ ದಲಿತ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದ ಕೃತಿ. ಈ ಕೃತಿಯು ಕೇವಲ ಒಬ್ಬ ವ್ಯಕ್ತಿಯ ವ್ಯಕ್ತಿಗತ ಆತ್ಮಕಥೆ ಆಗಿರದೆ ಸಮಾಜದಲ್ಲಿನ ಜಾತೀಯತೆ, ಅಸಮಾನತೆ ಮತ್ತು ಸಾಮಾಜಿಕ ತಾರತಮ್ಯಗಳ ಹೋರಾಟದ ಸಾಕ್ಷಿಯಾಗಿದೆ. ಆತ್ಮಕಥೆಗಳು ಸಾಮಾನ್ಯವಾಗಿ ವ್ಯಕ್ತಿಯ ವೈಯಕ್ತಿಕ ಜೀವನ ಕಥನವನ್ನು ದಾಖಲಿಸುತ್ತವೆ. ಆದರೆ ಕನ್ನಡದಲ್ಲಿನ ದಲಿತ ಆತ್ಮಕಥೆಗಳು ತಮ್ಮ ವೈಯಕ್ತಿಕ ಅನುಭವವನ್ನು ಸಮಾಜದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳೊಂದಿಗೆ ಜೋಡಿಸಿವೆ. ಆತ್ಮಕಥೆಯಲ್ಲಿ ಮಾಲಗತ್ತಿಯವರು ತಮ್ಮ ದಲಿತ ಬದುಕಿನ ವೈಯಕ್ತಿಕ ಅನುಭವಗಳನ್ನು ಸಾಮಾಜಿಕ ಸಂಗತಿಗಳೊಂದಿಗೆ ಸೇರಿಸಿ ಬರೆದಿರುವ ರೀತಿ ಓದುಗರನ್ನು ನೇರವಾಗಿ ಆಕರ್ಷಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಅವರ ಆತ್ಮಕಥೆ ಕೇವಲ ವೈಯಕ್ತಿಕ ನೆಲೆಗಟ್ಟಿನಿಂದ ಕೂಡಿರದೆ ಅದು ಇಡೀ ದಲಿತ ಜನಾಂಗ ಅಥವಾ ಸಮುದಾಯದ ಶೋಷಿತ ನೋವನ್ನು ಪ್ರತಿಬಿಂಬಿಸುವ ಆಯಾಮವಾಗಿದೆ ಎಂಬುದರ ಬಗ್ಗೆ ವಿವರವಾಗಿ ವಿಶ್ಲೇಷಣೆಗೆ, ವಿಮರ್ಶೆಗೆ ಒಳಪಡಿಸಲಾಗಿದೆ.

## KEYWORDS:

ಗೌರ್ಮೆಂಟ್ ಬ್ರಾಹ್ಮಣ, ದಲಿತ ಆತ್ಮಕಥನ, ಸಾಮಾಜಿಕ ಶೋಷಣೆ, ಅರವಿಂದ ಮಾಲಗತ್ತಿ, ಜಾತಿ ತಾರತಮ್ಯ.

ಅರವಿಂದ ಮಾಲಗತ್ತಿ ಅವರು ಕನ್ನಡದ ದಲಿತ ಸಾಹಿತ್ಯ ಪ್ರಕಾರದ ಪ್ರಮುಖ ಕವಿಯಾಗಿ, ಕಾದಂಬರಿಕಾರರಾಗಿ, ಹಾಗೂ ವಿಮರ್ಶಕರಾಗಿ ಖ್ಯಾತಿ ಪಡೆದಿದ್ದಾರೆ. ಇದಲ್ಲದೆ ಕವನ, ಕಥೆ, ನಾಟಕ, ಸಂಶೋಧನೆ ಮತ್ತು ಜಾನಪದ ಕ್ಷೇತ್ರ ಮುಂತಾದ ಹಲವು ಪ್ರಕಾರಗಳಲ್ಲಿ ಅರವತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳು ಮಾನವನ ಅಸ್ತಿತ್ವ, ಅವರ ಹಕ್ಕುಗಳು, ಸಾಮಾಜಿಕ ನ್ಯಾಯ ಮತ್ತು ಮಾನವೀಯತೆ ಎಂಬ ಪ್ರಮುಖ ಕೇಂದ್ರೀಯ ವಿಷಯಗಳನ್ನು ಆವರಿಸಿವೆ. ‘ಗೌರ್ಮೆಂಟ್ ಬ್ರಾಹ್ಮಣ’ ಎಂಬ ಕೃತಿಯು ಇವರ ಆತ್ಮಕಥೆಯಾಗಿದೆ. ಇದು ೧೯೯೪ ರಲ್ಲಿ ಪ್ರಕಟಗೊಂಡಿದ್ದು ದಲಿತ ಸಾಹಿತ್ಯದ ಒಂದು ಮೈಲಿಗಲ್ಲು ಎಂದು ಪರಿಗಣಿಸಲ್ಪಟ್ಟಿದೆ. ಆತ್ಮಕಥೆಯಲ್ಲಿ ತಮ್ಮ ದಲಿತ ಬದುಕಿನ ವೈಯಕ್ತಿಕ ಅನುಭವಗಳನ್ನು ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಗತಿಗಳೊಂದಿಗೆ

ಜೋಡಿಸಿ ಬರೆದಿರುವ ಈ ಕೃತಿ ಓದುಗರನ್ನು ನೇರವಾಗಿ ಆಕರ್ಷಿಸುತ್ತದೆ. 'ಬ್ರಾಹ್ಮಣ' ಎಂದರೆ ಪರಂಪರೆಯಿಂದಲೂ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಉನ್ನತ ವರ್ಗ, ಶ್ರೇಷ್ಠ ಜಾತಿ ಎಂಬುದನ್ನು ಪ್ರತಿನಿಧಿಸುತ್ತದೆ. ಆದರೆ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ' ಎಂಬ ಶಬ್ದವು ದಲಿತರು ಸರ್ಕಾರಿ ಸೌಲಭ್ಯ, ಹುದ್ದೆ ಅಥವಾ ಮೀಸಲಾತಿ ಮೂಲಕ ಬಂದ ಮಾನ್ಯತೆಯನ್ನು ಸೂಚಿಸುತ್ತದೆ. ಪರಂಪರೆಯಿಂದ ದೊರೆಯದ ಬ್ರಾಹ್ಮಣ ಸ್ಥಾನವನ್ನು ಸರ್ಕಾರದ ನೀತಿ ರೀತಿಗಳಿಂದ ಪಡೆದ 'ಹೊಸ ಬ್ರಾಹ್ಮಣ' ಎಂಬ ಆತ್ಮ ವಿಮರ್ಶಾತ್ಮಕ ಧೋರಣೆ ಇಲ್ಲಿ ನಿರೂಪಿತವಾಗಿದೆ. ಈ ದೃಷ್ಟಿಯಿಂದ ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಆತ್ಮಕಥೆಯಲ್ಲಿ ನಿರೂಪಿತಗೊಂಡಿರುವ ದಲಿತ ಅನುಭವದ ಚಿತ್ರಣ, ಜಾತಿಸಮಸ್ಯೆ, ಶೈಕ್ಷಣಿಕ ಜೀವನದ ಸಂಗತಿಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿದೆ.

'ಗೌರ್ಮೆಂಟ್ ಬ್ರಾಹ್ಮಣ' ಎಂಬ ಶೀರ್ಷಿಕೆಯೇ ಒಂದು ವ್ಯಂಗ್ಯ. ಮಾಲಗತ್ತಿ ಅವರ ಕಥೆ ಇಡೀ ದಲಿತ ಸಮಾಜದ ಬದುಕಿನ ಸಂಕೇತ. ಅದು ವೈಯಕ್ತಿಕ ನೆಲೆಯಿಂದ ಅದು ಸಮೂಹದ ನೆಲೆಗೆ ಬಂದು ಪ್ರತಿನಿಧಿಸಿದೆ. ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕಥೆಯಲ್ಲಿ ತಾವು ಹುಟ್ಟಿ ಬೆಳೆದ ಗ್ರಾಮೀಣ ಪರಿಸರದ ಅನುಭವಗಳನ್ನು ಅಭಿವ್ಯಕ್ತಿಸಿದ್ದಾರೆ. ಆ ಮುಖೇನ ದಲಿತಕೇರಿಯಲ್ಲಿ ನಡೆಯುವ ಬದುಕಿನ ಅಪರೂಪದ ನೈಜ ರೂಪಗಳನ್ನು ನಿರೂಪಿಸಿದ್ದಾರೆ. ದಲಿತಕೇರಿಯಲ್ಲಿನ ಮಹಿಳೆಯರ ಮತ್ತು ಪುರುಷರ ಚರ್ಯೆಗಳು, ದೈವಗಳ ಆರಾಧನೆ, ಸಂಪ್ರದಾಯಗಳ ಆಚರಣೆ, ಶೋಷಣೆ, ದಬ್ಬಾಳಿಕೆ, ಅಸೂಯೆ, ಮೋಸ, ವಂಚನೆ, ಮಾಂಸ ಮತ್ತು ಮದ್ಯಗಳ ನಡುವೆ ನಡೆಯುವ ಹೊಡೆದಾಟ ಮುಂತಾದ ಅಂಶಗಳನ್ನು ತಾವು ಕಂಡಂತೆ, ಅನುಭವಿಸಿದಂತೆ ಅನಾವರಣಗೊಳಿಸಿದ್ದಾರೆ. ಇವು ಲೇಖಕರ ಬದುಕಿನ ಸ್ವಂತ ಕಥೆಯಾಗಿರದೇ ಇಡೀ ತಮ್ಮ ಊರಿನ ದಲಿತ ಜನಾಂಗದ ಜೀವನ ಚಿತ್ರಣಗಳಾಗಿವೆ. ಮಾಲಗತ್ತಿಯವರು ದಲಿತ ಜನಾಂಗದ ಪ್ರತಿನಿಧಿಯಾಗಿ ತಮ್ಮ ಸಮುದಾಯದ ಚರಿತ್ರೆಯನ್ನು ಯಥಾವತ್ತಾಗಿ ದಾಖಲಿಸಿದ್ದಾರೆ.

ಅರವಿಂದ ಮಾಲಗತ್ತಿ ಅವರ ಬಾಲ್ಯವು ಬಡತನ, ಜಾತಿ ಆಧಾರಿತ ತಿರಸ್ಕಾರ ಮತ್ತು ಸಾಮಾಜಿಕ ಅಸಮಾನತೆಯ ನಡುವೆ ಬೆಳೆದದ್ದು. ಅವರ ವಿದ್ಯಾಭ್ಯಾಸ, ಸರ್ಕಾರಿ ನೌಕರಿ, ಸಾಹಿತ್ಯ ಚಟುವಟಿಕೆ ಮತ್ತು ಅವರು ಅನುಭವಿಸಿದ ಜಾತಿಪದ್ಧತಿಯ ತೊಡಕುಗಳನ್ನು ಅವರ ಆತ್ಮಕಥೆ ತೆರೆದಿಟ್ಟಿವೆ. ಅರವಿಂದ ಮಾಲಗತ್ತಿಯವರ ಆತ್ಮಕಥನವು ಮುಖ್ಯವಾಗಿ ಅವರ ಬಾಲ್ಯದ ದಿನದಿಂದ ತೊಡಗಿ ಕಾಲೇಜು ಮುಗಿಸುವವರೆಗಿನ ಅನುಭವಗಳಾಗಿವೆ. ಮಾಲಗತ್ತಿಯವರು ತಾವು ಬಾಲ್ಯದಲ್ಲಿ ಮಾಂಸ ಮಾರುವ ವ್ಯಾಪಾರಿಯಾದ ಅನುಭವವನ್ನು 'ಸತ್ತ ಕುರಿಗಳು ಮತ್ತು ಮಾಂಸದ ಮಾರಾಟ' ಎಂಬ ಭಾಗದಲ್ಲಿ ನಿರೂಪಿಸಿದ್ದಾರೆ. "ಮಾಂಸದ ಗುಪ್ಪೆಗಳು ಕೈ ತೂಕದಲ್ಲಿ ಹಾಕಲಾಗುತ್ತಿತ್ತು. ಮಾವ ಎಲ್ಲಾದರೂ ಹೋದರೆ ನಾನೇ ಅಲ್ಲಿಯ ಮಾಲೀಕ. ಗುಪ್ಪೆ ದೊಡ್ಡದಿದ್ದರೆ ಎಂಟು ಆಣೆ. ಚಿಕ್ಕದಿದ್ದರೆ ನಾಲ್ಕು ಆಣೆಗೆ ಮಾರಲಾಗುತ್ತಿತ್ತು. ತೆಗೆದುಕೊಂಡು ಹೋಗುವವರೆಂದರೆ ನಮ್ಮ ಕೇರಿಯಲ್ಲಿ ಇರುವ

ಜನಗಳೇ. ಮಾದಿಗರು, ಮಾಚಗಾರರು, ಸಮಗಾರರು, ಹೆಚ್ಚೆಂದರೆ ಲಂಬಾಣಿಗರು".[1] ಮೇಲಿನ ಸಂಗತಿಯನ್ನು ದಾಖಲಿಸುವುದರ ಮೂಲಕ ತಮ್ಮ ಜನಾಂಗದವರು ಮಾಂಸದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದರು ಮತ್ತು ನಿತ್ಯ ಜೀವನದಲ್ಲಿ ಅದನ್ನು ಬಳಕೆ ಮಾಡುತ್ತಿದ್ದರು ಎಂಬ ವಾಸ್ತವ ಚಿತ್ರಣವನ್ನು ನೀಡಿದ್ದಾರೆ.

ಮಾಲಗತ್ತಿ ಅವರ ಬದುಕಿನ ತಿರುವು ಶಿಕ್ಷಣ. ತಾವು ಬೀದಿ ದೀಪದಲ್ಲಿ ಓದುತ್ತಿರುವಾಗ ತಮ್ಮ ಕೇರಿಯಲ್ಲಿ ಜರುಗುತ್ತಿದ್ದ ನೈಜ ಘಟನೆಗಳನ್ನು ದಾಖಲಿಸಿದ್ದಾರೆ. "ನಾನು ದಾರಿದೀಪದ ಅಡಿಯಲ್ಲಿ ಕುಳಿತು ಓದುವುದು ಕೆಲವರಿಗೆ ಬೇಡವಾಗಿತ್ತು. ಅದರಲ್ಲೂ ಊರ ಶ್ರೀಮಂತರಿಗೆ ಪ್ರಾಣಸಂಕಟ ತಂದಿತ್ತು. ರಾತ್ರಿ ಸೂಲೆಗೇರಿಗೆ ಮೋಜು ಮಾಡಲು ಬರುವ ಈ ಜನ ನನ್ನನ್ನು ಅಲ್ಲಿಂದ ಕದಲಿಸಬೇಕು ಎನ್ನುವ ಉದ್ದೇಶ ಹೊಂದಿದವರಾಗಿದ್ದರು. ಎಷ್ಟೇ ವೇಷ ಮರೆಸಿಕೊಂಡು ಕೇರಿಗೆ ಬಂದರೂ ಅದು ಅಷ್ಟೇ ಬೇಗ ಕೇರಿಯಲ್ಲಿ ಜಾಹೀರಾಗುತ್ತಿತ್ತು. ನಡುರಾತ್ರಿಯಲ್ಲಿ ಕುಳಿತು ಓದುವ ನನ್ನ ಓದು ಊರವರಿಗೆ ಶಾಪವಾಗಿದ್ದರೂ, ಅವರು ಕೊಡುವ ಕಿರುಕುಳ ನನಗೆ ಇನ್ನಷ್ಟು ರಾತ್ರಿಯೇ ಓದುವಂತೆ ಪ್ರೇರೇಪಿಸಿತು".[2] ಹೀಗೆ ಮಾಲಗತ್ತಿಯವರು ತಾವು ಅನುಭವಿಸಿದ ಸಾಮಾಜಿಕ ಶೋಷಣೆಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ಮೇಲಿನ ಸಂಗತಿಯನ್ನು ಅವಲೋಕಿಸಿದಾಗ ಲೇಖಕರಿಗೆ ದಲಿತರ ಕೇರಿಯಲ್ಲಿ ನಡೆಯುತ್ತಿದ್ದ ಘಟನೆಗಳು ಹೇಳುವುದು ಮುಖ್ಯವಾಗಿರದೆ ಅಲ್ಲಿಗೆ ಬಂದು ಹೋಗುವ ಜನರಲ್ಲಿ ಎಚ್ಚರಿಕೆ, ಜಾಗೃತಿಯ ಅರಿವನ್ನು ಮೂಡಿಸುವ ಪ್ರಮುಖ ಆಶಯವಾಗಿ ಕಂಡು ಬರುತ್ತದೆ.

ದಲಿತ ಜನಾಂಗದವರು ಹೆಣದ ಮೇಲೆ ಎಸೆಯುತ್ತಿದ್ದ ಬಿಡಿಕಾಸಿಗೆ ಹೇಗೆ ಸ್ಪರ್ಧೆಗೆ ಇಳಿಯುತ್ತಿದ್ದರು ಎಂಬುದರ ಬಗ್ಗೆ 'ಹೆಣದ ಮೇಲಿನ ದುಡ್ಡು ಮತ್ತು ಮದುವೆಯ ಊಟ' ಎಂಬ ಭಾಗದಲ್ಲಿ ದಾಖಲಿಸಿದ್ದಾರೆ. ಮದುವೆ, ಹಬ್ಬ, ಜಾತ್ರೆ, ತಿಥಿ ಮುಂತಾದ ಸಂದರ್ಭಗಳಲ್ಲಿ ಶ್ರೀಮಂತರ ಮನೆಯ ಮುಂದೆ ಅವರು ನೀಡುವ ಊಟಕ್ಕೆ ಕೇರಿಯ ಜನರೆಲ್ಲರೂ ಬರುತ್ತಿದ್ದರು. ಶ್ರೀಮಂತರು ನೀಡುವ ಊಟ, ಉಪಚಾರ ಮುಂತಾದವುಗಳು ದಲಿತ ಜನಾಂಗದವರಿಗೆ ಸಂತೋಷದ ಕ್ಷಣಗಳಾಗಿದ್ದವು ಎಂಬ ಸಂಗತಿಗಳನ್ನು ದಾಖಲಿಸುವ ಮೂಲಕ ತಮ್ಮ ಕೇರಿಯ ಬದುಕಿನ ಜನಜೀವನದ ವಸ್ತು ಸ್ಥಿತಿಯ ನೈಜತೆಯನ್ನು ಅನಾವರಣಗೊಳಿಸಿದ್ದಾರೆ. 'ಕರಿಯಬೆಕ್ಕು ಬೆಳ್ಳಗಾಗಲಿಲ್ಲ' ಎಂಬ ಭಾಗದಲ್ಲಿ ದಲಿತ ಜನಾಂಗದವರು ಮೇಲ್ವರ್ಗದವರಿಂದ ಶೋಷಣೆಗೆ ಗುರಿಯಾಗುತ್ತಿದ್ದ ಪದ್ಧತಿಗಳನ್ನು ನಿರೂಪಿಸಿದ್ದಾರೆ. ದಲಿತ ಕೇರಿಯವರಿಗಾಗಿ ಪ್ರತ್ಯೇಕವಾಗಿ ಬಟ್ಟೆ ಹೊಗೆಯುವ ಜಾಗ ಮತ್ತು ನೀರು ಸೇದುವ ಜಾಗಗಳಲ್ಲಿ ತಮಗೆ ಅವಕಾಶವಿರಲಿಲ್ಲ ಎಂಬುದನ್ನು ಲೇಖಕರು ದಾಖಲಿಸಿ ದಲಿತ ಜನಾಂಗದವರ ಶೋಷಣೆಯ ನೈಜ ಚಿತ್ರಣವನ್ನು ನೀಡಿದ್ದಾರೆ.

ಸಂಪ್ರದಾಯದ ಆಚರಣೆಗಳಲ್ಲಿ ದಲಿತ ಜನಾಂಗದವರು ಹೇಗೆ ಶೋಷಣೆಗೆ ಒಳಗಾಗುತ್ತಿದ್ದರು ಎಂಬುದನ್ನು "ಓಕುಳಿ" ಎಂಬ ಈಸ್ಟ್ಮನ್ ಕಲರ್ ಚಿತ್ರ' ಎಂಬ

ಭಾಗದಲ್ಲಿ ದಾಖಲಿಸಿದ್ದಾರೆ. 'ಓಕುಳಿ' ಎಂಬ ಸಂಪ್ರದಾಯದ ಆಚರಣೆಯ ಆಟದಲ್ಲಿ ತಮ್ಮ ಕೇರಿಯ ಹೆಂಗಸರನ್ನು ಅರೆಬೆತ್ತಲೆಗೊಳಿಸುತ್ತಿದ್ದರು. ಪ್ರತಿ ವರ್ಷ ಈ ಕ್ರೀಡೆ ನಡೆಯಲೇಬೇಕು ಎನ್ನುವ ನಿಯಮ. ನಡೆಸದಿದ್ದರೆ ಊರಿಗೆ ಮಳೆ ಬರಲಾರದು. ಬೆಳೆಗೆ ರೋಗ ಬರುತ್ತದೆ. ಊರಿಗೆ ಮಾರಿ ಬರುತ್ತದೆ ಎಂಬ ಈ ನಂಬಿಕೆಗಳಿಗೆ ಹೆದರುವ ದಲಿತ ಹೆಂಗಸರು ಮತ್ತು ಗಂಡಸರು ಮನೋರಂಜನೆಯ ಹೆಸರಿನಲ್ಲಿ ಹೇಗೆ ಬಲಿಯಾಗುತ್ತಿದ್ದರು ಎಂಬುದನ್ನು ಚಿತ್ರಿಸಿದ್ದಾರೆ. ಹೀಗೆ ತಮ್ಮ ಕೇರಿಯ ಜನರು ಹಲವಾರು ಸಂಪ್ರದಾಯದ ಹೆಸರಿನಲ್ಲಿ ಆಚರಣೆ, ನಂಬಿಕೆ, ಮೋಸ, ಮಾಂಸ, ಮದ್ಯ, ಅವಮಾನ, ಶೋಷಣೆಗಳನ್ನು ಅನುಭವಿಸುತ್ತಿದ್ದರು ಎಂಬುದನ್ನು ಅರವಿಂದ ಮಾಲಗತ್ತಿ ಅವರು ತಮ್ಮ ಜನಾಂಗದ ಒಳ ಮತ್ತು ಹೊರ ಸಂಸ್ಕೃತಿಗಳನ್ನು ದಾಖಲಿಸುವುದರ ಮುಖೇನ ತಮ್ಮ ಜನಾಂಗದ ಬದುಕಿನ ಚಿತ್ರಣವನ್ನು ನಿರೂಪಿಸಿದ್ದಾರೆ.

ಅರವಿಂದ ಮಾಲಗತ್ತಿಯವರು ತಾವು ಒಬ್ಬ ದಲಿತರಾಗಿ ಅನುಭವಿಸಿದ ಅವಮಾನ, ಶೋಷಣೆ, ದಬ್ಬಾಳಿಕೆ ಹಾಗೂ ತಮ್ಮ ಸಮುದಾಯವು ಈ ಸಾಮಾಜಿಕ ಅಸಮಾನತೆಗೆ ಗುರಿಯಾದ ನೈಜ ಅನುಭವಗಳನ್ನು ಆತ್ಮಕಥೆಯಲ್ಲಿ ತೆರೆದಿಟ್ಟಿದ್ದಾರೆ. ಶ್ರೇಣಿಕೃತ ಜಾತಿ ವ್ಯವಸ್ಥೆಯ ಈ ಸಮಾಜದಲ್ಲಿ ಕೆಳವರ್ಗದವರಿಗೆ ಇದ್ದಂತಹ ಸ್ಥಾನಮಾನ, ಸಾಮಾಜಿಕ ಅಸಮಾನತೆಗಳನ್ನು ಕುರಿತಂತೆ ದಲಿತ ಸಮುದಾಯವು ಎದುರಿಸುತ್ತಿದ್ದ ವಾಸ್ತವ ಅನುಭವಗಳನ್ನು ನೈಜವಾಗಿ ನಿರೂಪಿಸಿದ್ದಾರೆ. ತಮ್ಮ ಕೇರಿಯಲ್ಲಿ ತಮ್ಮ ಜಾತಿಯವರನ್ನು ಇತರೆ ಜಾತಿಯವರು ಯಾವ ರೀತಿ ಅವಮಾನಕ್ಕೆ ಒಳಪಡಿಸುತ್ತಿದ್ದರು, ಜಾತೀಯತೆಯಲ್ಲಿ ಉತ್ತಮ – ನೀಚ, ಶ್ರೇಷ್ಠ – ಕನಿಷ್ಠ ಎಂಬ ಶ್ರೇಣಿಕೃತ ಜಾತಿಪದ್ಧತಿಗೆ ಬಲಿಯಾದ ವಾಸ್ತವ ಚಿತ್ರಣವನ್ನು ದಾಖಲಿಸಿದ್ದಾರೆ. "ನನ್ನ ದಲಿತ ಕೇರಿಯ ಜನ ಬಟ್ಟೆ ತೊಳೆಯುವುದಕ್ಕಾಗಿ ಹೋಗುವ ಸ್ಥಳಗಳು ಮೂರು. ಒಂದು ನಮ್ಮೂರ ಕೆರೆ. ಈ ಕೆರೆಯ ಐದು ಕಡೆಗಳಲ್ಲಿ ಬಟ್ಟೆ ತೊಳೆಯುವ ಕಲ್ಲುಗಳನ್ನು ಹಾಕಲಾಗಿದೆ. ಒಂದೊಂದು ಭಾಗದ ಕಲ್ಲುಗಳಿಗೆ ಒಂದೊಂದು ಸಮಾಜದ ಜನ ಗುತ್ತಿಗೆ ಹಿಡಿದಂತೆ ಪದ್ಧತಿ. ನಮ್ಮ ಕೇರಿಯ ಜನರಲ್ಲಿ ನಮ್ಮ ಮನೆಯವರೇ ಮೊದಲ ಬಾರಿಗೆ ಊರ ಕೆರೆಯಲ್ಲಿ ಬಟ್ಟೆಯನ್ನು ತೊಳೆಯುವ ಸಾಹಸ ಮಾಡಿದವರು. ಈಗಲೂ ಜಾತಿಯ ಜನ ಬಟ್ಟೆ ತೊಳೆಯಲು ಹೋಗುವುದಿಲ್ಲವೆಂದರೆ ನಿಮಗೆ ಆಶ್ಚರ್ಯವೆನಿಸಬಹುದು....., ಮೇಲು ಜಾತಿಯವರೂ ಜಾತಿಯ ಹೆಸರು ಹೇಳಿ ಗುರುತಿಸಿ ಹಾವು ಕಂಡಂತೆ ಹೆದರಿ ಮುಖ ಕಿವುಚಿ ತಾತ್ಸಾರ ಮನೋಭಾವನೆಯಿಂದ ನೋಡುತ್ತಿದ್ದರು."[3] ಹೀಗೆ ಮೇಲ್ಕಂಡ ಸಂಗತಿಯನ್ನು ದಾಖಲಿಸುವುದರ ಮೂಲಕ ದಲಿತ ಸಮುದಾಯವು ಯಾವ ರೀತಿ ಶೋಷಣೆಗೆ, ಅಪಮಾನಕ್ಕೆ ಒಳಗಾಗುತ್ತಿದ್ದರು ಎಂಬುದನ್ನು ಮಾಲಗತ್ತಿಯವರು ನೇರವಾಗಿ ನಿರೂಪಿಸಿದ್ದಾರೆ.

ಅರವಿಂದ ಮಾಲಗತ್ತಿಯವರು ತಾವು ಕೂಡ ಜಾತಿನಿಂದನೆಗೆ ಗುರಿಯಾದ ಪ್ರಸಂಗವನ್ನು ದಾಖಲಿಸಿದ್ದಾರೆ. ಅವರ ಊರಿನಲ್ಲಿ ಮೇಲು ಜಾತಿಯವರ ಬಾವಿಯಲ್ಲಿ ಊರಿನಲ್ಲಿ ಈಜು ಬಲ್ಲವರು ಎಲ್ಲರೂ ಹೋಗುತ್ತಿದ್ದರು. ಆ ಬಾವಿಯನ್ನು ಕಾಯಲು ಒಬ್ಬ ವ್ಯಕ್ತಿ ಇರುತ್ತಿದ್ದ. ಈ ವ್ಯಕ್ತಿ ಕೆಳಜಾತಿಯರನ್ನು ಈಜಲು ಆ ಬಾವಿಗೆ ಬಿಡುತ್ತಿರಲಿಲ್ಲ.

ಆದರೆ ಮಾಲಗತ್ತಿಯವರು ಆ ಕಾವಲುಗಾರನ ಕಣ್ಣನ್ನು ತಪ್ಪಿಸಿ ಈಜಲು ಹೋಗಿ ಸಿಕ್ಕಿ ಬೀಳುತ್ತಾರೆ. ಈ ಪ್ರಸಂಗವು ಮೇಲ್ವರ್ಗದವರು ಕೆಳವರ್ಗದವರನ್ನು ಯಾವ ಬಗೆಯಲ್ಲಿ ಶೋಷಣೆಗೆ, ಅಪಮಾನಕ್ಕೆ ಮತ್ತು ಜಾತಿನಿಂದನೆಗೆ ಒಳಪಡಿಸುತ್ತಿದ್ದರು ಎಂಬ ಪ್ರಮುಖ ಅಂಶವನ್ನು ಬಹಿರಂಗಪಡಿಸುತ್ತದೆ.

ಕೆಲವು ದಲಿತೇತರರು ತಾವು ದಲಿತರನ್ನು ಸಮಾನರಾಗಿ ಕಾಣುತ್ತೇವೆ, ತಾವು ಯಾವುದೇ ಬಗೆಯ ಜಾತಿ ತಾರತಮ್ಯ ಮನೋಭಾವನೆಯನ್ನು ಮಾಡುವುದಿಲ್ಲ ಎಂದು ಹೇಳಿಕೊಂಡು ಮಾತಿಗೆ ಮಾತ್ರ ಆ ಭಾವವನ್ನು ತೋರಿಸಿ ದಲಿತರನ್ನು ಅಸ್ಪೃಶ್ಯರಂತೆ ಕಂಡು ಅವಮಾನಿಸುತ್ತಿದ್ದರು. ಸ್ವತಃ ತಮಗೆ ಆದ ಅನುಭವವನ್ನು ಮಾಲಗತ್ತಿಯವರು ಆತ್ಮಕಥೆಯಲ್ಲಿ ನಿರೂಪಿಸುವುದರ ಮೂಲಕ ಅದನ್ನು ಬಟ್ಟಬಯಲು ಮಾಡಿದ್ದಾರೆ. ಮಾಲಗತ್ತಿ ಮಿತ್ರರೊಬ್ಬರು ಅವರ ಮನೆಗೆ ಊಟಕ್ಕೆ ಆಹ್ವಾನಿಸಿದಾಗ 'ಊಟ ಮಾಡಿದ ತಟ್ಟೆ ನಾವೇ ತೊಳೆಯಬೇಕು' ಎಂಬ ಮಿತ್ರನ ಮಾತಿಗೆ 'ನನ್ನ ಮನೆಯಲ್ಲಿ ನಾನು ಒಬ್ಬನೇ ಅಲ್ಲಿ ನಾನು ತೊಳೆಯುವುದಿಲ್ಲವೇ?' ಎಂದು ಉತ್ತರ ನೀಡಿ ತಾವು ಊಟ ಮಾಡಿದ ಪಾತ್ರೆಯನ್ನು ಹೊರಗೆ ಬಂದು ತೊಳೆದು ಇಟ್ಟರು. ಬೇರೆ ಪಾತ್ರೆಗಳೆಲ್ಲಾ ಒಳಕ್ಕೆ ಹೋದವು. ಆದರೆ ಮಾಲಗತ್ತಿಯವರು ಊಟ ಮಾಡಿದ ಪಾತ್ರೆ ಒಳಕ್ಕೆ ಹೋಗಲೇ ಇಲ್ಲ. ಹೀನ ಕುಲದವನು ಮುಟ್ಟಿದ ಪಾತ್ರೆ ಅದು, ಮಲಿನವಾಗಿದೆ, ಅದನ್ನು ಒಳಗೆ ತೆಗೆದುಕೊಂಡು ಹೋಗಬಾರದು ಎಂಬ ಸಂಪ್ರದಾಯವನ್ನು ಪಾಲಿಸಿದರೇ ವಿನಾ ತಾವು ಪ್ರಚಾರ ಮಾಡಿಕೊಂಡ ಹಾಗೆ ನಡೆದುಕೊಳ್ಳಲಿಲ್ಲ ಎಂಬ ವಿಚಾರವನ್ನು ಪ್ರಸ್ತುತಪಡಿಸಿದ್ದಾರೆ. "ಆಕಸ್ಮಿಕವಾಗಿ ದಲಿತನೊಬ್ಬ ಊಟ ಮಾಡುವಾಗ ಮೇಲುಜಾತಿಯ ಜನರ ಪಾತ್ರೆಗಳನ್ನು ಮುಟ್ಟಿದರೆ, ದನದ ಸಗಣಿಯನ್ನು ಆ ಪಾತ್ರೆಗಳಿಗೆ ಮೆತ್ತಿ ಬೆಂಕಿಯಲ್ಲಿ ಆ ಪಾತ್ರೆಗಳನ್ನು ಸುಡುವುದು. ಅನಂತರದಲ್ಲಿ ಹುಣಸೇರಾಡಿ ಮತ್ತು ಉಪ್ಪಿನ ನೀರಿನಲ್ಲಿ ಅದ್ದಿ ಮನೆಯ ಪಾತ್ರೆಗಳೊಂದಿಗೆ ಸೇರಿಸಿಕೊಳ್ಳುತ್ತಿದ್ದರಂತೆ! ಒಬ್ಬ ಅಸ್ಪೃಶ್ಯನ ಸ್ಪರ್ಶಕ್ಕಿಂತ ಆಕಳು ಉಚ್ಚೆಯ ಸ್ಪರ್ಶ ಎಷ್ಟೊಂದು ಹಿತವೆನಿಸುತ್ತದೆಯಲ್ಲವೇ.......ಆಶ್ಚರ್ಯವೆಂದರೆ ಈ ಸಂಪ್ರದಾಯಗಳು ಈಗಲೂ ನಮ್ಮ ನಡುವೆ ಜೀವಂತವಾಗಿವೆ"[4] ಎಂಬ ಸಂಗತಿಯನ್ನು ದಾಖಲಿಸುವುದರ ಮೂಲಕ ಮಾಲಗತ್ತಿಯವರು ತಮ್ಮನ್ನು ಕೀಳಾಗಿ ಕಂಡದ್ದು ಗಾಢವಾಗಿ ಪ್ರಭಾವ ಬೀರಿ ದಲಿತರನ್ನು ಅಸ್ಪೃಶ್ಯರನ್ನಾಗಿ ಕಾಣುವ ಸಂಗತಿಯನ್ನು ಮೇಲ್ಕಂಡಂತೆ ನಿರೂಪಿಸಿದ್ದಾರೆ.

ಮಾಲಗತ್ತಿ ಅವರ ಆತ್ಮಕಥನದ ಅನುಭವಗಳ ವೈಶಿಷ್ಟ್ಯಗಳಲ್ಲಿ 'ನನ್ನ ಮಾಜಿ ಪ್ರೇಯಸಿ' ಭಾಗ ಕೂಡ ಒಂದಾಗಿದೆ. ಅವರು ಕಾಲೇಜು ದಿನಗಳಲ್ಲಿ ಮೇಲುಜಾತಿಯ ಹುಡುಗಿಯನ್ನು ಪ್ರೀತಿಸಿದಾಗ ವೈವಾಹಿಕ ಜೀವನ ಪ್ರವೇಶಿಸುವ ಸಂದರ್ಭದಲ್ಲಿ ಜಾತಿಸಮಸ್ಯೆ ಅಡ್ಡ ಬರುತ್ತದೆ. ಸಾಮಾಜಿಕವಾಗಿ, ಕೌಟುಂಬಿಕವಾಗಿ ಮಾಲಗತ್ತಿಯವರನ್ನು ಪ್ರೇಯಸಿಯು ದೂರವಾಗಿಸುತ್ತಾಳೆ. ತಮ್ಮ ಬದುಕಿನ ತೀರಾ ವೈಯಕ್ತಿಕ ವಿಚಾರಗಳಂತೆ ಕಂಡುಬರುವ ಮೇಲಿನ ಪ್ರಕರಣದ ಹಿಂದೆ ಜಾತಿವ್ಯವಸ್ಥೆಯು ಎಷ್ಟರಮಟ್ಟಿಗೆ ಸಮಾಜದಲ್ಲಿ ಬೇರೂರಿದೆ ಎಂಬ ಅಂಶವನ್ನು ಮನಗಾಣಬಹುದು. ಮದುವೆಯ ವಿಷಯದಲ್ಲಿ ಜಾತಿವ್ಯವಸ್ಥೆ ಏನೆಲ್ಲಾ ಅವಾಂತರಗಳನ್ನು ನಿರ್ಮಾಣ

ಮಾಡುತ್ತದೆ ಎಂಬುದಕ್ಕೆ ಅವರ ಆತ್ಮಕಥೆ ನಿದರ್ಶನ. ಕೆಳವರ್ಗದವರನ್ನು ಮೇಲ್ವರ್ಗದವರು ಮದುವೆಯಾದರೆ ಆ ಕುಟುಂಬವನ್ನು ಸಮಾಜ ನೋಡುತ್ತಿದ್ದ ರೀತಿ, ಆ ಕುಟುಂಬ ಎದುರಿಸಬೇಕಾದ ಸಮಸ್ಯೆ ಇವುಗಳನ್ನು ಮಾಲಗತ್ತಿಯವರು ನೇರವಾಗಿ ದಾಖಲಿಸಿದ್ದಾರೆ. "ನೀನು ನನ್ನ ಮುಖ ನೋಡುವುದಲ್ಲ, ನನ್ನ ತಂಗಿ ಮುಖ ನೋಡು. ನಾನು ಹೀಗೆ ಮಾಡಿದರೆ ನನ್ನ ಇಬ್ಬರು ತಂಗಿಯರ ಗತಿ ಏನು? ಅವರನ್ನು ನಮ್ಮ ಜಾತಿಯಲ್ಲಿ ಯಾರು ಮದುವೆ ಆಗುತ್ತಾರೆ? ನನ್ನ ತಾಯಿ ಹಾರ್ಟ್ ಪೇಷಂಟ್. ತಂದೆ ಹೇಗೆ ಅಂತ ನಿನಗೆ ಗೊತ್ತು. ನನ್ನಣ್ಣ ಅರವಿಂದನ ಬಗ್ಗೆ ಏನು ಹೇಳಬೇಕಿಲ್ಲ. ಇನ್ನೊಬ್ಬ ಅಣ್ಣ ನಿನ್ನ ಸ್ನೇಹಕ್ಕೆ ಮೆಚ್ಚಿದ್ದು ನಿಜ. ಆದರೆ ಅವನು ಮದುವೆಗೆ ಒಪ್ಪೊಲ್ಲ."[5] ಮೇಲ್ಕಂಡಂತೆ ಮಾಲಗತ್ತಿಯವರು ತಾವು ಅನುಭವಿಸಿದ ಜಾತಿಯ ನಿಂದನೆ, ಅಪಮಾನ, ಸಾಮಾಜಿಕ ಅಸಮಾನತೆಗೆ ಒಳಗಾದ ಹಲವು ಸನ್ನಿವೇಶಗಳನ್ನು ಆತ್ಮಕಥನದಲ್ಲಿ ಬಹಿರಂಗವಾಗಿ ಪ್ರಸ್ತುತಪಡಿಸಿದ್ದಾರೆ.

ಅರವಿಂದ ಮಾಲಗತ್ತಿಯವರು ತಾವು ಮತ್ತು ತಮ್ಮ ಸಮುದಾಯವು ಮೇಲು ವರ್ಗದವರಿಂದ ಶೋಷಣೆ, ದಬ್ಬಾಳಿಕೆ, ಹಿಂಸೆ, ಅವಮಾನ, ಜಾತಿ ತಾರತಮ್ಯ ಮುಂತಾದ ಸಾಮಾಜಿಕ ಅಸಮಾನತೆಯ ಅವಮಾನವೀಯ ಅಂಶಗಳಿಗೆ ಬಲಿಯಾದ ಸಂಗತಿಗಳನ್ನು ನೈಜವಾಗಿ ದಾಖಲಿಸಿದ್ದಾರೆ. ದಲಿತ ವರ್ಗದವರನ್ನು ಈ ಸಮಾಜವು ಕಂಡ ಬಗೆ, ದುಡಿಸಿಕೊಂಡ ರೀತಿ-ನೀತಿಗಳನ್ನು ನಿರ್ಭಯವಾಗಿ ಅನಾವರಣಗೊಳಿಸಿದ್ದಾರೆ. ಇದರ ಜೊತೆಜೊತೆಗೆ ಸಮಾಜದಲ್ಲಿ ದಲಿತ ಜನಾಂಗಕ್ಕೆ ಇರುವ ಸ್ಥಾನಮಾನ, ಗೌರವ, ಮನ್ನಣೆ, ಮಾನವೀಯ ಅನುಕಂಪಗಳ ಮೌಲ್ಯ ಮತ್ತು ಅಪಮೌಲ್ಯದ ಕುರಿತು ನಿರೂಪಿಸಿದ್ದಾರೆ. ಮಾಲಗತ್ತಿ ಅವರು ತಾವು ತೆಗೆದುಕೊಂಡ ನಿಲುವು, ಒಲವು, ಪ್ರತಿರೋಧ, ಆಕ್ರೋಶ, ತಿಳುವಳಿಕೆ ಪ್ರಜ್ಞಾವಂತಿಕೆಯ ವಸ್ತುನಿಷ್ಠ ವಿವರಗಳನ್ನು ಆತ್ಮಕಥೆಯಲ್ಲಿ ನೈಜವಾಗಿ ನಿವೇದಿಸಿಕೊಂಡಿದ್ದಾರೆ. ಯಾವುದೇ ತಿಥಿ, ಹಬ್ಬ, ಹರಿದಿನ, ಜಾತ್ರೆ, ಮುಂತಾದ ಆಚರಣೆ ಸಂದರ್ಭದಲ್ಲಿ ಅಲ್ಲಿ ಸಿಗುವ ಊಟದ ಸಲುವಾಗಿ ದಲಿತರ ದಂಡೇ ಅಲ್ಲಿಗೆ ಹೋಗುತ್ತಿತ್ತು. ಜೊತೆಗೆ ತಮ್ಮ ಊರಿನ ಸೇಟ್ಜಿ ಶ್ರೀಮಂತರ ಮಗಳ ಮದುವೆಯ ಸಂದರ್ಭವನ್ನು ನಿರೂಪಿಸುವುದರ ಮೂಲಕ ದಲಿತರ ಬದುಕಿನ ನೈಜ ಸಂಗತಿಗಳನ್ನು ಪ್ರತಿಬಿಂಬಿಸಿದ್ದಾರೆ. ಮದುವೆಯ ಊಟಕ್ಕೆ ಹೋಗುವ ದಲಿತರು ಊಟ ಮುಗಿಸಿದ ನಂತರ ಪಾತ್ರೆಯಲ್ಲಿಟ್ಟಿದ್ದ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು. ಒಮ್ಮೆ ಊಟ ಮಾಡಿ ಹೋದ ದಲಿತರು ಮತ್ತೊಮ್ಮೆ ಬಾರದಿರಲಿ ಎನ್ನುವ ವಿಚಾರವನ್ನು ಮಾಲಗತ್ತಿಯವರು ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ.

ಶ್ರೇಣಿಕೃತ ವರ್ಣವ್ಯವಸ್ಥೆಯಲ್ಲಿ ದಲಿತರನ್ನು ಸಮಾಜದಿಂದ ತುಂಬಾ ದೂರ ಇಟ್ಟು ಅವರನ್ನು ಕೆಳಮಟ್ಟದವರೆಂದು ಅಸ್ಪೃಶ್ಯರನ್ನಾಗಿ ಕಾಣತೊಡಗಿತು. ಉಳಿದ ಜನಾಂಗದವರಂತೆ ಇವರಿಗೆ ಯಾವುದೇ ಮಾನ್ಯತೆ ಇರಲಿಲ್ಲ. ಕೆಳವರ್ಗದವರು ಎಂಬ ಒಂದು ಕಾರಣಕ್ಕೆ ಅವರ ಎಲ್ಲಾ ಕೆಲಸ ಕಾರ್ಯಗಳನ್ನು ಅವರೇ ಮಾಡಿಕೊಳ್ಳಬೇಕಾಗಿತ್ತು. ಒಂದೊಂದು ಕಸುಬು ಒಂದೊಂದು ಜನಾಂಗಕ್ಕೆ ಇದ್ದರೂ ಕೂಡ ದಲಿತರ ಯಾವ ಕೆಲಸ ಕಾರ್ಯಗಳನ್ನು ಅವರು ಮಾಡುತ್ತಿರಲಿಲ್ಲ.

ಹೀಗಾಗಿ ದಲಿತರು ತಮ್ಮ ಕ್ಷೌರವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ''ಮೊದಲು ನಮ್ಮೂರ ನಾಯಿಂದರು ನಮ್ಮನ್ನು ಮುಟ್ಟುತ್ತಿರಲಿಲ್ಲ. ಹೀಗಿದ್ದಾಗ ಅವರು ನಮಗೆ ತಲೆಬೋಳಿಸುವುದಂತೂ ದೂರದ ಮಾತಾಗಿತ್ತು. ಈ ದೂರದ ಮಾತೇ ನಮ್ಮ ಮನೆತನದವರಿಗೆ ಆ ಕ್ಷೌರಿಕ ವಿದ್ಯೆಯನ್ನು ಕರಗತ ಮಾಡಿಕೊಳ್ಳುವಂತೆ ಮಾಡಿತು....... ಪ್ರತಿಯೊಬ್ಬರ ಮನೆಯಲ್ಲಿ ಒಂದೊಂದು ಕತ್ತಿಯ ಚೀಲ ಇದ್ದೇ ಇರುತ್ತಿತ್ತು. ನಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಿದ್ದರು ಎನ್ನಿ..[6] ಎಲ್ಲಾ ವರ್ಗದವರು ತಮ್ಮ ಕೆಲಸವನ್ನು ನಮ್ಮ ಕಡೆಯಿಂದ ಮಾಡಿಕೊಳ್ಳುವರು, ದುಡಿಸಿಕೊಳ್ಳುತ್ತಿದ್ದರು. ಆದರೆ ದಲಿತರ ಕೆಲಸವನ್ನು ಯಾರೂ ಕೂಡ ಮಾಡುತ್ತಿರಲಿಲ್ಲ. ಅವರನ್ನು ಇಡೀ ಸಮಾಜ ದೂರವಿರಿಸಿ, ಅಸ್ಪೃಶ್ಯರನ್ನಾಗಿಸಿದೆ. ಈ ಕ್ಷೌರಿಕ ವೃತ್ತಿ ಹಿರಿಯರಿಂದ ಮುಂದಿನ ತಲೆಮಾರಿಗೆ ಬಳುವಳಿಯಾಗಿ ಬರುತ್ತಿದ್ದವು. 'ತಂದೆಯ ಕೈಯಿಂದ ಅಣ್ಣಂದಿರ ಕೈಗೆ, ಅವರ ಕೈಯಿಂದ ನನ್ನ ಕೈಗೆ ಸೇರಿದಾಗ ನಾನು ಆ ಕೆಲಸದಲ್ಲಿ ಎಷ್ಟೊಂದು ಪಳಗಿದೆನೆಂದರೆ, ನಾನು ಉತ್ತಮ ಕ್ಷೌರಿಕನಾದೆ'. ಎಂದು ಮಾಲಗತ್ತಿಯವರು ಹೇಳಿರುವಲ್ಲಿ ಸಮಾಜವು ಕೆಳವರ್ಗದವರನ್ನು ಸ್ವಾವಲಂಬಿಯನ್ನಾಗಿಸದೇ ಹೀನವಾಗಿ ಕಂಡ ದಲಿತರ ಅನುಭವಗಳನ್ನು ಮಾಲಗತ್ತಿ ಅವರು ದಲಿತ ಸಮುದಾಯದ ಪ್ರತಿನಿಧಿಯಾಗಿ ಅನಾವರಣಗೊಳಿಸಿದ್ದಾರೆ.

ಸರ್ಕಾರಿ ಸೌಲಭ್ಯಗಳು ದಲಿತರಿಗೆ ಬದುಕಿನ ಬಾಗಿಲು ತೆರೆದವು. ಆದರೂ 'ಸರ್ಕಾರದ ಮೀಸಲಾತಿಯಿಂದ ಓದಿದವನು' ಎಂಬ ಸಮಾಜದ ತುಚ್ಛೀಕರಣದ ಅನುಭವವನ್ನು ಮಾಲಗತ್ತಿಯವರು ಆತ್ಮಕಥೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಶಿಕ್ಷಣ, ಉದ್ಯೋಗ ಮುಂತಾದ ಹಾದಿಯಲ್ಲಿ ಮಾನವೀಯತೆ ಮತ್ತು ಸಮಾನತೆಯ ಕನಸು ಬೆಳೆದರೂ ಸಮಾಜದಲ್ಲಿ ಜಾತಿಪದ್ಧತಿಯು ಹಿನ್ನೆಲೆಯಲ್ಲಿ ಹಿಂಬಾಲಿಸುತ್ತಿರುವುದನ್ನು ಅವರು ನೇರವಾಗಿ ದಾಖಲಿಸಿ, ಅದನ್ನು ಖಂಡಿಸಿದ್ದಾರೆ. 'ಗೌರ್ಮೆಂಟ್ ಬ್ರಾಹ್ಮಣ' ಆತ್ಮಕಥೆಯು ಅರವಿಂದ ಮಾಲಗತ್ತಿ ಅವರು ಬದುಕು ಸಾಗಿಸಿದ ಹಾದಿ, ಸಮಾಜದಲ್ಲಿನ ಅನುಭವಗಳು, ಶಿಕ್ಷಣ, ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಎದುರಾದ ಸಂಘರ್ಷಗಳ ಚರಿತ್ರೆಯಾಗಿದೆ. ಈ ಕೃತಿ ಕೇವಲ ಒಬ್ಬ ವ್ಯಕ್ತಿಯ ಆತ್ಮಚರಿತ್ರೆಯಲ್ಲ. ದಲಿತರು ಅನುಭವಿಸಿದ ನೋವು, ಶೋಷಣೆ, ಅವಮಾನ, ಹೋರಾಟ ಮತ್ತು ಅದರಿಂದ ಮುಕ್ತಿ ಹೊಂದುವ ಚೇತನದ ಅಭಿವ್ಯಕ್ತಿಯಾಗಿದೆ. ಈ ಪ್ರಸ್ತುತ ಆತ್ಮಕಥೆಯು ದಲಿತ ಚಳುವಳಿಯ ನೈಜ ದಾರಿಯನ್ನು ಪ್ರತಿಬಿಂಬಿಸಿದೆ. ಇದು ವ್ಯಕ್ತಿಗತವಾಗಿ ಸಾಧಿತವಾಗುವುದಿಲ್ಲ. ಬದಲಾಗಿ ಸಮೂಹ ಹೋರಾಟದ ಅಗತ್ಯತೆಯನ್ನು ಕೃತಿ ಮನಗಾಣಿಸುತ್ತದೆ.

ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ' ಆತ್ಮಕಥೆಯು ಕನ್ನಡದ ದಲಿತ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದ ಕೃತಿ. ಈ ಆತ್ಮಕಥೆಯು ಕೇವಲ ಒಬ್ಬ ವ್ಯಕ್ತಿಯ ವ್ಯಕ್ತಿಗತ ಆತ್ಮ ಚರಿತ್ರೆ ಆಗಿರದೆ ಸಮಾಜದಲ್ಲಿನ ಜಾತಿ ಪದ್ಧತಿ, ಅಸಮಾನತೆ, ಶ್ರೇಷ್ಠ-ಕನಿಷ್ಠ, ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ ಮತ್ತು ಸಾಮಾಜಿಕ ತಾರತಮ್ಯಗಳ ಬದಲಾವಣೆಯ ಹೋರಾಟದ ಸಾಕ್ಷ್ಯವೂ ಹೌದು. ಆತ್ಮಕಥೆಗಳು ಸಾಮಾನ್ಯವಾಗಿ

ವ್ಯಕ್ತಿಯ ವೈಯಕ್ತಿಕ ಜೀವನ ಕಥನವನ್ನು ದಾಖಲಿಸುತ್ತವೆ. ಆದರೆ ಕನ್ನಡದಲ್ಲಿನ ದಲಿತ ಆತ್ಮಕಥೆಗಳು ತಮ್ಮ ವೈಯಕ್ತಿಕ ಅನುಭವಗಳನ್ನು ಸಮಾಜದ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳೊಂದಿಗೆ ಜೋಡಿಸಿವೆ. ಈ ದೃಷ್ಟಿಯಿಂದ ಅರವಿಂದ ಮಾಲಗತ್ತಿ ಅವರ ಆತ್ಮಕಥೆ ದಲಿತ ಆತ್ಮಕಥೆಗಳಲ್ಲಿ ಅನನ್ಯ ಸ್ಥಾನವನ್ನು ಪಡೆದುಕೊಂಡಿದೆ. 'ಗೌರ್ಮೆಂಟ್ ಬ್ರಾಹ್ಮಣ' ಕೇವಲ ಅರವಿಂದ ಮಾಲಗತ್ತಿಯವರ ಜೀವನದ ಕಥೆ ಅಲ್ಲ. ಬದಲಾಗಿ ಅದು ಪ್ರತಿಯೊಬ್ಬ ದಲಿತರ ಹೋರಾಟದ ಪ್ರತಿಧ್ವನಿ. ಸಮಾಜದ ಅಸಮಾನತೆಯ ದಾಖಲೆ ಮತ್ತು ಮಾನವನು ಮಾನವೀಯತೆ ಹಾಗೂ ಸಮಾನತೆಯ ಹಾದಿಯಲ್ಲಿ ಸಾಗುವ ದಾರಿದೀಪವಾಗಿದೆ.

## ಕೊನೆ ಟಿಪ್ಪಣಿಗಳು:

1. ಅರವಿಂದ ಮಾಲಗತ್ತಿ, (2014), ಗೌರ್ಮೆಂಟ್ ಬ್ರಾಹ್ಮಣ, ಮೈಸೂರು: ಚೇತನ ಬುಕ್ ಹೌಸ್, ಪು.ಸಂ. 38
2. ಅದೇ, ಪು.ಸಂ. 35
3. ಅದೇ, ಪು.ಸಂ. 19
4. ಅದೇ, ಪು.ಸಂ. 86
5. ಅದೇ, ಪು.ಸಂ. 66–67
6. ಅದೇ, ಪು.ಸಂ. 90

## ಪರಾಮರ್ಶನ ಗ್ರಂಥಗಳು:

1. ಅರವಿಂದ ಮಾಲಗತ್ತಿ, (2014), ಗೌರ್ಮೆಂಟ್ ಬ್ರಾಹ್ಮಣ, ಮೈಸೂರು: ಚೇತನ ಬುಕ್ ಹೌಸ್.
2. ಶಿವಮೂರ್ತಿ, (2011), ಕನ್ನಡ ಆತ್ಮಕಥನ ಸಾಹಿತ್ಯ, ಬಳ್ಳಾರಿ: ಸಂಸ್ಕೃತಿ ಪ್ರಕಾಶನ.
3. ಶಂಕರೇಗೌಡ, (2005), ಪ್ರೊ. ಅರವಿಂದ ಮಾಲಗತ್ತಿ ಅವರ ಸಾಹಿತ್ಯ– ಚಿಂತನೆ, ಪಿ.ಎಚ್‌ಡಿ ಮಹಾಪ್ರಬಂಧ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.